# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 209

ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 06.12.2023

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಸ್ತೆ ಸಾರಿಗೆ ನಿಗಮಗಳಲ್ಲಿರುವ ಒಟ್ಟು ಚಾಲಕ/ ನಿರ್ವಾಹಕರ ಸಂಖ್ಯೆ ಎಷ್ಟು; ಖಾಲಿ ಇರುವ ಚಾಲಕ/ ನಿರ್ವಾಹಕರ ಹುದ್ದೆಗಳು ಎಷ್ಟು; ಖಾಲಿ ಇರಲು ಕಾರಣಗಳೇನು; ಯಾವ ಕಾರಣದಿಂದ ನೇಮಕಾತಿ ಮಾಡಿಕೊಳ್ಳುತ್ತಿಲ್ಲ; (ಮಾಹಿತಿ ನೀಡುವುದು) ನೇಮಕಾತಿ ಮಾಡಿಕೊಂಡಿದ್ದಲ್ಲಿ ಯಾವಾಗ, ಎಷ್ಟು ಸಂಖ್ಯೆಯಲ್ಲಿ ನೇಮಕ ಮಾಡಲಾಗಿದೆ; (ನಿಗಮವಾರು ಪ್ರತ್ಯೇಕ ವಿವರಗಳನ್ನು ನೀಡುವುದು)</td><td>ನಾಲ್ಕು ನಿಗಮ/ಸಂಸ್ಥೆಯಲ್ಲಿ ಅಕ್ಟೋಬರ್-2023ರ ಅಂತ್ಯಕ್ಕೆ ಚಾಲಕ/ ನಿರ್ವಾಹಕ/ ಚಾಲಕ-ಕಂ-ನಿರ್ವಾಹಕರ ಕಾರ್ಯ ನಿರ್ವಹಣೆ ಹಾಗೂ ಖಾಲಿ ಹುದ್ದೆಗಳ ವಿವರ ಕೆಳಕಂಡಂತಿದೆ:<br>
<table>
<tr><th>ಸಂಸ್ಥೆಗಳು</th><th>ಕಾರ್ಯನಿರ್ವಹಣೆ</th><th>ಖಾಲಿ ಹುದ್ದೆ</th></tr>
<tr><td>ಕ.ರಾ.ರ.ಸಾ.ನಿ.</td><td>24676</td><td>3180</td></tr>
<tr><td>ಬೆಂ.ಮ.ಸಾ.ಸಂ.</td><td>23163</td><td>1857</td></tr>
<tr><td>ವಾ.ಕ.ರ.ಸಾ.ಸಂ.</td><td>14981</td><td>416</td></tr>
<tr><td>ಕ.ಕ.ರ.ಸಾ.ನಿ.</td><td>12490</td><td>1609</td></tr>
<tr><td>ಒಟ್ಟಾರೆ</td><td>75310</td><td>7062</td></tr>
</table>
ಸಿಬ್ಬಂದಿಗಳ ನಿವೃತ್ತಿ, ಸ್ವಯಂ ನಿವೃತ್ತಿ, ರಾಜೀನಾಮೆ, ಅನಾರೋಗ್ಯ, ಮರಣ, ಸೇವೆಯಿಂದ ವಜಾಗೊಳ್ಳುವುದರಿಂದ ಚಾಲನಾ ಹುದ್ದೆಗಳು ಕಾಲಕಾಲಕ್ಕೆ ಖಾಲಿಯಾಗಲು ಕಾರಣವಾಗಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ನೇಮಕಾತಿ ಕೈಗೊಂಡಿರುವುದಿಲ್ಲ. ಪ್ರಸ್ತುತ ಸಾಲಿನಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ವಿವರಗಳನ್ನು ಉಪ ಪ್ರಶ್ನೆ 'ಆ'ರಲ್ಲಿ ನೀಡಲಾಗಿದೆ.<br><br>
ನಾಲ್ಕು ಸಾರಿಗೆ ಸಂಸ್ಥೆಗಳಿಂದ ಕಳೆದ 04 ವರ್ಷಗಳಲ್ಲಿ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.</td></tr>
<tr><td>ಆ</td><td>ನಿಗಮಗಳಲ್ಲಿ ಖಾಲಿ ಇರುವ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ಅದರ ಪ್ರಕ್ರಿಯೆಯ ವಿವರಗಳನ್ನು ನೀಡುವುದು)</td><td>ಪ್ರಸಕ್ತ ಸಾಲಿನಲ್ಲಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಖಾಲಿ ಇರುವ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ:<br><br>
ಕ.ರಾ.ರ.ಸಾ.ನಿಗಮ:-<br><br>
ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆ ಹಾಗೂ 300 ತಾಂತ್ರಿಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>
ಅಲ್ಲದೇ, ನಿಗಮದಲ್ಲಿ 1239 ಹೊರಗುತ್ತಿಗೆ ಚಾಲಕರು ಕಾರ್ಯನಿರ್ವಹಿಸುತ್ತಿರುತ್ತಾರೆ.</td></tr>
</table>

**ಬೆಂ.ಮ.ಸಾ.ಸಂಸ್ಥೆ:-**

ಸಂಸ್ಥೆಯಲ್ಲಿ 2023-24ನೇ ಸಾಲಿನ ಕಾರ್ಯಯೋಜನೆಯನ್ವಯ ಪ್ರಸ್ತುತ 2500 ನಿರ್ವಾಹಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಾಹೀರಾತು ಹೊರಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

**ವಾ.ಕ.ರ.ಸಾ.ಸಂಸ್ಥೆ:**

ಸಂಸ್ಥೆಯಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿ ಪೂರ್ಣಗೊಳಿಸಲು ಸಾಕಷ್ಟು ಕಾಲಾವಕಾಶ ಬೇಕಾಗುವುದರಿಂದ ತಾತ್ಕಾಲಿಕವಾಗಿ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಪ್ರಸ್ತುತ ಅವಶ್ಯಕತೆಯನ್ನು ಆಧರಿಸಿ 100 ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಮುಂದಿನ ಹಂತದಲ್ಲಿ 180 ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕ್ರಮ ಜಾರಿಯಲ್ಲಿರುತ್ತದೆ.

**ಕ.ಕ.ರ.ಸಾ.ನಿಗಮ:-**

ನಿಗಮದಲ್ಲಿ 925-ಚಾಲಕ ಹುದ್ದೆ ಮತ್ತು 694-ಚಾಲಕ-ಕಂ-ನಿರ್ವಾಹಕ ಹುದ್ದೆಗಳ ಸೇರಿದಂತೆ 16-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು, ಜನವರಿ 2024ರ ಒಳಗಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುವುದು.

15-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಬಾಕಿ ಇದ್ದ 36 ಹಿಂಬಾಕಿ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಇ ಬಳ್ಳಾರಿ ವಿಭಾಗದಲ್ಲಿರುವ ಒಟ್ಟು ಚಾಲಕ/ನಿರ್ವಾಹಕರ, ಮೆಕ್ಯಾನಿಕ್‌ಗಳು ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳೆಷ್ಟು; ಬಳ್ಳಾರಿ ವಿಭಾಗಕ್ಕೆ ಕೊನೆಯದಾಗಿ ನೇಮಕವಾಗಿದ್ದು ಯಾವಾಗ; ಎಷ್ಟು ಸಿಬ್ಬಂದಿಯನ್ನು ನೇಮಿಸಲಾಗಿದೆ? (ಮಾಹಿತಿ ನೀಡುವುದು)

ಬಳ್ಳಾರಿ ವಿಭಾಗದಲ್ಲಿ ಅಕ್ಟೋಬರ್-2023ರ ಮಾಹೆಯ ಅಂತ್ಯಕ್ಕೆ ಸಿಬ್ಬಂದಿಗಳ ವಿವರ ಕೆಳಕಂಡಂತಿದೆ:-

| **ಹುದ್ದೆ** | **ಕಾರ್ಯ ನಿರ್ವಹಣೆ** | **ಕೊರತೆ** | **ತಾತ್ಕಾಲಿಕ ನಿಯೋಜನೆ (90 days)** | **ಹೊರ ಗುತ್ತಿಗೆ ಚಾಲಕರು** | **ಒಟ್ಟು ಕೊರತೆ 6=3-(4+5)** |
|---|---|---|---|---|---|
| **1** | **2** | **3** | **4** | **5** | **6** |
| ಚಾಲಕ | 450 | 133 | 15 | 73 | 45 |
| ನಿರ್ವಾಹಕ | 81 | 203 | | | 203 |
| ಚಾಲಕ-ಕಂ-ನಿರ್ವಾಹಕ | 555 | 5 | 4 | - | 1 |
| ಮೆಕ್ಯಾನಿಕ್ | 199 | 20 | - | - | 20 |
| ಇತರೆ ಸಿಬ್ಬಂದಿಗಳು | 390 | 126 | - | - | 126 |
| **ಒಟ್ಟು** | **1675** | **487** | **19** | **73** | **395** |

ಬಳ್ಳಾರಿ ಸೇರಿದಂತೆ ನಿಗಮದ ಎಲ್ಲಾ ವಿಭಾಗಗಳಿಗೆ 2016-2017ನೇ ಸಾಲಿನಲ್ಲಿ ಅಂತಿಮವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ.

| **ಕ್ರ. ಸಂ** | **ನೇಮಕಾತಿ ಮಾಡಿ ಬಳ್ಳಾರಿ ವಿಭಾಗಕ್ಕೆ ನಿಯೋಜಿಸಿದ ಹುದ್ದೆಗಳು** | **ಹುದ್ದೆಗಳ ಸಂಖ್ಯೆ** |
|---|---|---|
| 1 | ಚಾಲಕ | 02 |
| 2 | ಚಾಲಕ-ಕಮ್-ನಿರ್ವಾಹಕ | 02 |
| 3 | ಸಹಾಯಕ ಉಗ್ರಾಣ ರಕ್ಷಕ | 02 |
| 4 | ಕುಶಲಕರ್ಮಿ | 06 |
| 5 | ತಾಂತ್ರಿಕ ಸಹಾಯಕ | 11 |
| 6 | ಕರಾಸಾ ಪೇದೆ | 16 |
| 7 | ಸಹಾಯಕ ಸಂಚಾರ ನಿರೀಕ್ಷಕ | 02 |
| | **ಒಟ್ಟು** | **41** |

ಅಲ್ಲದೇ ಅನುಕಂಪದ ಆಧಾರದ ಮೇಲೆ ನಿಗಮದಲ್ಲಿ ಖಾಲಿ ಇರುವ ದರ್ಜೆ-3ರ ಮೇಲ್ವಿಚಾರಕೇತರ ಹಾಗೂ ದರ್ಜೆ-4ರ ಹುದ್ದೆಗಳಿಗೆ ಕಾಲಕಾಲಕ್ಕೆ ನಿರಂತರವಾಗಿ ನೇಮಕಾತಿಗೆ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಟಿಡಿ 180 ಟಿಸಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು